# KARNATAKA LOKAYUKTA

No.UPLOK-2/DE.76/2019/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 29.01.2022.

## RECOMMENDATION

Sub:- Departmental inquiry against Shri Y.S.Manjunath, Village Accountant, Thimmasandra Circle, Doddaballapur Taluk, Bangalore Rural District - reg.

Ref:- 1) Government Order No.RD. 21 BDP 2018 dt.20.02.2019.

2) Nomination order No. UPLOK-2/DE.76/2019 dated 06.03.2019 of Upalokayukta, State of Karnataka.

3) Inquiry report dated 19.01.2022 of Additional Registrar of Enquiries-14, Karnataka Lokayukta, Bengaluru.

~~~~~

The Government by its order dated 20.02.2019 initiated the disciplinary proceedings against Shri Y.S.Manjunath, Village Accountant, Thimmasandra Circle, Doddaballapur Taluk, Bangalore Rural District, [hereinafter referred to as Delinquent Government Official, for short as 'DGO' ] and entrusted the departmental inquiry to this Institution.
~~~~~

2. This Institution by Nomination UPLOK-2/DE.76/2019 dated 06.03.2019 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him.

3. The DGO was tried for the charge of not residing in the Head Quarters and thereby causing inconvenience to the public and committed misconduct.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the above charge against the DGO Shri Y.S.Manjunath, Village Accountant, Thimmasandra Circle, Doddaballapur Taluk, Bangalore Rural District, is ' proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is

hereby recommended to the Government to accept the report of Enquiry Officer.

6. As per the First Oral Statement of DGO furnished by the Enquiry Officer, DGO Shri Y.S.Manjunath, is due to retire from service on 31-08-2039.

7. Having regard to the nature of charge *'proved'* against the DGO and considering the totality of circumstances, it is hereby recommended to the Government to impose penalty of ' withholding 2 increments payable to DGO Shri Y.S.Manjunath, without cumulative effect'.

8. Action taken in the matter shall be intimated to this Authority.

Connected records are enclosed herewith.

29/1/22

**(JUSTICE B.S.PATIL)**
Upalokayukta,
State of Karnataka.

# <u>ಕರ್ನಾಟಕ ಲೋಕಾಯುಕ್ತ</u>

ನಂ.ಉಪಲೋಕ್-2/ಡಿಇ-76/2019/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 19/01/2022.

## ವಿಚಾರಣಾ ವರದಿ

**<u>ಉಪಸ್ಥಿತರು</u>: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ **ಶ್ರೀ. ವೈ.ಎಸ್ ಮಂಜುನಾಥ್,** ಗ್ರಾಮ ಲೆಕ್ಕಿಗರು, ತಿಮ್ಮಸಂದ್ರ ವೃತ್ತ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ/576/2018/ಉನಿವಿ-2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 13/11/2018.
2. ಸರ್ಕಾರದ ಆದೇಶ ಸಂಖ್ಯೆ:ಕಂಇ 21 ಬಿಡಿಪಿ 2018, ಬೆಂಗಳೂರು, ದಿನಾಂಕ: 20/02/2019.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/76/2019, ಬೆಂಗಳೂರು ದಿನಾಂಕ: 06/03/2019.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ಜಿ.ಎಂ ರಾಜಣ್ಣ** ಬಿನ್ ಎ ಮುನೆಗೌಡ, ಗಡ್ಡಂಬಚ್ಚಹಳ್ಳಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ **ಶ್ರೀ. ವೈ.ಎಸ್ ಮಂಜುನಾಥ್,** ಗ್ರಾಮ ಲೆಕ್ಕಿಗರು, ತಿಮ್ಮಸಂದ್ರ ವೃತ್ತ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ಸಲ್ಲಿಸಿರುತ್ತಾರೆ, ಆ.ಸ.ನೌರವರು ತಿಮ್ಮಸಂದ್ರ ವೃತ್ತದ ಗ್ರಾಮ ಲೆಕ್ಕಾಧಿಕಾರಿಯಾಗಿದ್ದು, ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವುದಿಲ್ಲ ಎಂದು ದಿನಾಂಕ: 15/09/2017 ರಂದು ದೂರುದಾರರು

ತಹಶೀಲ್ದಾರ್ ದೊಡ್ಡಬಳ್ಳಾಪುರ ರವರಿಗೆ ದೂರನ್ನು ನೀಡಿದ್ದು ಇರುತ್ತದೆ. ತಹಶೀಲ್ದಾರ್‌ರವರು ಸದರಿ ದೂರಿನ ಅನ್ವಯ ರಾಜಸ್ವ ನಿರೀಕ್ಷಕರು ಕಸಬಾ ಹೋಬಳಿ–2, ದೊಡ್ಡಬಳ್ಳಾಪುರ ಇವರಿಗೆ ದೂರುದಾರರು ಮಾಡಿದ ಆಪಾದನೆ ಬಗ್ಗೆ ವರದಿಯನ್ನು ಪಡೆದುಕೊಂಡು ಮಾಹಿತಿಯನ್ನು ನೀಡಲು ತಿಳಿಸಿದ್ದು ಇರುತ್ತದೆ. ರಾಜಸ್ವ ನಿರೀಕ್ಷರು ಆ.ಸ.ನೌರವರಿಗೆ ನೋಟಿಸ್‌ನ್ನು ನೀಡಿ, ಅವರಿಂದ ವಿವರಣೆಯನ್ನು ಪಡೆದುಕೊಂಡು ದಿನಾಂಕ: 28/10/2017 ರಂದು ತಹಶೀಲ್ದಾರ್ ರವರಿಗೆ ಆ.ಸ.ನೌರವರ ಕಾರ್ಯವೈಖರಿಯ ಬಗ್ಗೆ ವರದಿಯನ್ನು ಸಲ್ಲಿಸಿರುತ್ತಾರೆ. ದಿನಾಂಕ: 09/11/2017 ರಂದು ತಹಶೀಲ್ದಾರ್ ರವರು ಎಲ್ಲಾ ಸಿಬ್ಬಂದಿಗಳಿಗೆ ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸಬೇಕೆಂದು ಆದೇಶಿಸಿದ್ದರೂ, ಅ.ಸ.ನೌ ರವರು ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರಲ್ಲಿಲ್ಲ ಎಂದು, ಇದರಿಂದ ಗ್ರಾಮಸ್ಥರಿಗೆ ತುಂಬಾ ತೊಂದರೆಯಾಗುತ್ತದೆ, ಗ್ರಾಮಸ್ಥರು ತಮ್ಮ ಕೆಲಸಕ್ಕಾಗಿ ಬಂದಾಗ ಆ.ಸ.ನೌ ರವರು ಯಾರಿಗೂ ಸಿಗುತ್ತಿಲ್ಲ. ಆದ್ದರಿಂದ ಆ.ಸ.ನೌ ರವರ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 20/02/2019ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 06/03/2019 ರಂದು ಅಪರ ನಿಬಂಧಕರು, ವಿಚಾರಣೆಗಳು–14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ ಶ್ರೀ. ವೈ.ಎಸ್ ಮಂಜುನಾಥ್, ಗ್ರಾಮ ಲೆಕ್ಕಿಗರು, ತಿಮ್ಮಸಂದ್ರ ವೃತ್ತ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು, ವಿಚಾರಣೆಗಳು–14 ರವರು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2

B

ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 03/07/2019 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ಅನುಬಂಧ-1**

**ದೋಷಾರೋಪಣೆ-1**

2. ಶ್ರೀ. ವೈ.ಎಸ್ ಮಂಜುನಾಥ್, ಗ್ರಾಮಲೆಕ್ಕಿಗರು, ದೊಡ್ಡಬಳ್ಳಾಪುರ ತಾಲ್ಲೂಕು ಆದ ನೀವು, ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು ರವರ ಆದೇಶದನ್ವಯ ತಿಮ್ಮಸಂದ್ರ ವೃತ್ತದ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ದಿ: 28.8.2017 ರಿಂದ 15.11.2018ರ ಸಂಜೆ 5.30ರ ವರೆಗೆ ಕೇಂದ್ರಸ್ಥಾನದಲ್ಲಿ ಕಾರ್ಯನಿರ್ವಹಿಸಿರುವುದಿಲ್ಲ. ಹೀಗೆ ಆ.ಸ.ನೌ.ರವರು ಕೇಂದ್ರಸ್ಥಾನದಲ್ಲಿ ಕರ್ತವ್ಯ ನಿರ್ವಹಿಸದೇ ಇದ್ದ ಕಾರಣ ಗ್ರಾಮಸ್ಥರಿಗೆ ತುಂಬಾ ತೊಂದರೆಯಾಗಿರುತ್ತದೆ. ಗ್ರಾಮಸ್ಥರು ತಮ್ಮ ಕೆಲಸಕ್ಕಾಗಿ ಬಂದಾಗ ಆ.ಸ.ನೌ.ರಾದ ನೀವು ಯಾರಿಗೂ ಸಿಗದೇ ಕೇಂದ್ರಸ್ಥಾನದಲ್ಲಿ ಇರದೇ ಕರ್ತವ್ಯ ಲೋಪ ಎಸಗಿರುತ್ತೀರಿ. ಅಲ್ಲದೇ ನೀವು ಸರ್ಕಾರಿ ನೌಕರರಾಗಿದ್ದು, ಕೇಂದ್ರಸ್ಥಾನದಲ್ಲಿ ವಾಸವಿರದೇ ಕರ್ತವ್ಯ ಲೋಪ ಎಸಗಿರುತ್ತೀರಿ.
3. ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ–2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

4. ದೂರುದಾರರಾದ ಶ್ರೀ ಜಿ.ಎಂ.ರಾಜಣ್ಣ, ತಂದೆ ಎ.ಮುನೆಗೌಡ, ಗಡ್ಡಂಬಚ್ಚನಹಳ್ಳಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಜಿಲ್ಲೆ ಇವರು ಶ್ರೀ ವೈ.ಎಸ್.ಮಂಜುನಾಥ್, ಗ್ರಾಮ ಲೆಕ್ಕಿಗರು, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

5. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ 3ನೇ ಎದುರುದಾರರು ದೊಡ್ಡಬಳ್ಳಾಪುರ ತಾಲ್ಲೂಕು ತಿಮ್ಮಸಂದ್ರ ವೃತ್ತದ ಗ್ರಾಮ ಲೆಕ್ಕಾಧಿಕಾರಿಯಾಗಿರುತ್ತಾರೆ. ಆದರೆ 3ನೇ ಎದುರುದಾರರು ಕೇಂದ್ರಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವುದಿಲ್ಲ. ಈ ಬಗ್ಗೆ ದಿ.15.9.2017ರಂದು 1ನೇ ಎದುರುದಾರರಿಗೆ ದೂರು ನೀಡಿದ್ದು, 1ನೇ ಎದುರುದಾರರ ಆದೇಶದ ಮೇರೆಗೆ 2ನೇ ಎದುರುದಾರರು ದಿ.28.10.2017ರಂದು ತಿಮ್ಮಸಂದ್ರ ಗ್ರಾಮದಲ್ಲಿ 3ನೇ ಎದುರುದಾರರು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ವರದಿ ನೀಡಿರುತ್ತಾರೆ. ದಿ.9.11.2017ರಂದು 1ನೇ ಎದುರುದಾರರು ಎಲ್ಲ ಸಿಬ್ಬಂದಿಗಳಿಗೆ ಕೇಂದ್ರಸ್ಥಾನದಲ್ಲಿದ್ದು ಕಾರ್ಯನಿರ್ವಹಿಸಬೇಕೆಂದು ಆದೇಶಿಸಿದರೂ 3ನೇ ಎದುರುದಾರರು ಕೇಂದ್ರಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. 1ನೇ ಎದುರುದಾರರು ಈ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ ವಿಚಾರಣೆ ಮಾಡಿರುವುದಿಲ್ಲ. 3ನೇ ಎದುರುದಾರರು ಕೇಂದ್ರಸ್ಥಾನದಲ್ಲಿ ಕರ್ತವ್ಯ ನಿರ್ವಹಿಸದೇ ಇದ್ದ ಕಾರಣ ಗ್ರಾಮಸ್ಥರಿಗೆ ತುಂಬಾ ತೊಂದರೆಯಾಗುತ್ತಿದೆ. ಗ್ರಾಮಸ್ಥರು ತಮ್ಮ ಕೆಲಸಕ್ಕಾಗಿ ಬಂದಾಗ 3ನೇ ಎದುರುದಾರರು ಯಾರಿಗೂ ಸಿಗುತ್ತಿಲ್ಲ. 1 ಮತ್ತು 2ನೇ

ಎದುರುದಾರರು 3ನೇ ಎದುರುದಾರರ ಕಾರ್ಯವೈಖರಿಯ ಬಗ್ಗೆ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ.

6. ದೂರಿನ ಜೊತೆಗೆ ದಿ.9.11.2017ರಂದು 1ನೇ ಎದುರುದಾರರು ಎಲ್ಲ ಸಿಬ್ಬಂದಿಗಳು ಕೇಂದ್ರಸ್ಥಾನದಲ್ಲಿದ್ದು ಕಾರ್ಯನಿರ್ವಹಿಸಬೇಕೆಂದು ನೀಡಿದ ಆದೇಶದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

7. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರಿಂದ ದಿ.15.9.2017ರಂದು ಬಂದ ಮನವಿಪತ್ರವನ್ನು ಪರಿಶೀಲಿಸಿ ರಾಜಸ್ವ ನಿರೀಕ್ಷಕರಾದ 2ನೇ ಎದುರುದಾರರಿಂದ 3ನೇ ಎದುರುದಾರರ ವಿರುದ್ಧ ಮಾಡಿದ ಆಪಾದನೆ ಬಗ್ಗೆ ವರದಿಯನ್ನು ಪಡೆದುಕೊಂಡು, ಎಲ್ಲ ಸಿಬ್ಬಂದಿಗಳು ತಮ್ಮ ಕೇಂದ್ರಸ್ಥಾನದಲ್ಲಿದ್ದು ಕಾರ್ಯನಿರ್ವಹಿಸಬೇಕೆಂದು ತಮ್ಮ ಪತ್ರ ಸಂ.ಸಿಬ್ಬಂದಿ/ಸಿ.ಆರ್/77/2017–18 ದಿ.9.11.2017ರಂದು ಕಛೇರಿ ಆದೇಶ ಹೊರಡಿಸಿ ದೂರುದಾರರ ದೂರಿನ ಮೇರೆಗೆ ಕ್ರಮಕೈಗೊಂಡಿರುತ್ತಾರೆಂದು ತಿಳಿಸಿರುತ್ತಾರೆ. ಮುಂದುವರೆದು, ತಿಮ್ಮಸಂದ್ರ ಗ್ರಾಮದಲ್ಲಿ ಸರ್ಕಾರಿ ಕಟ್ಟಡವಿಲ್ಲದ ಕಾರಣ ಹಾಲಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ ತಿಮ್ಮಸಂದ್ರ ಗ್ರಾಮದಲ್ಲಿ 3ನೇ ಎದುರುದಾರರು ಕೊಠಡಿಯನ್ನು ಪಡೆದು ಕಾರ್ಯನಿರ್ವಹಿಸುತ್ತಿದ್ದಾರೆಂದು ತಿಳಿಸಿರುತ್ತಾರೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯ ಜೊತೆಗೆ 3ನೇ ಎದುರುದಾರರು ಹಾಲಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ ತಿಮ್ಮಸಂದ್ರ ಗ್ರಾಮದಲ್ಲಿ ಕೊಠಡಿಯನ್ನು ಪಡೆದು ಕಾರ್ಯನಿರ್ವಹಿಸುತ್ತಿದ್ದಾರೆಂದು ತಿಳಿಸಿದ ಪತ್ರದ ಪ್ರತಿಯನ್ನು, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ತಮ್ಮ ಸಂಘದ

ಕೊಠಡಿಯನ್ನು ಗ್ರಾಮಲೆಕ್ಕಾಧಿಕಾರಿಯವರ ಕಛೇರಿಗೆ ನೀಡಿದ ಬಗ್ಗೆ ಬರೆದುಕೊಟ್ಟ ಪತ್ರದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

8. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಹಶೀಲ್ದಾರರ ನಿರ್ದೇಶನದಂತೆ 3ನೇ ಎದುರುದಾರರಿಗೆ ದೂರಿನಲ್ಲಿನ ಅಂಶಗಳನ್ನು ನೋಟೀಸ್‌ನ ಮೂಲಕ ತಿಳಿಸಿ 3ನೇ ಎದುರುದಾರರ ವಿವರಣೆಯನ್ನು ಪಡೆದುಕೊಂಡು ದಿ.28.10.2017ರಂದು ತಹಶೀಲ್ದಾರರಿಗೆ 3ನೇ ಎದುರುದಾರರ ಕಾರ್ಯವೈಖರಿಯ ಬಗ್ಗೆ ವರದಿ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ. ದಿ.9.11.2017ರಂದು 1ನೇ ಎದುರುದಾರರು ಎಲ್ಲ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿದ್ದು, ಸಾರ್ವಜನಿಕರಿಗೆ ಲಭ್ಯವಿದ್ದು ಕಾರ್ಯನಿರ್ವಹಿಸುವಂತೆ ಸೂಚಿಸಿ ಆದೇಶ ಹೊರಡಿಸಿರುತ್ತಾರೆಂದು ತಿಳಿಸಿರುತ್ತಾರೆ. 2ನೇ ಎದುರುದಾರರು ತಮ್ಮ ಆಕ್ಷೇಪಣೆಯ ಜೊತೆಗೆ ದಿ.28.10.2017ರಂದು 1ನೇ ಎದುರುದಾರರಿಗೆ ನೀಡಿದ ವರದಿಯ ಪ್ರತಿ, ಗ್ರಾಮ ಲೆಕ್ಕಾಧಿಕಾರಿಯವರ ವರದಿಯ ಪ್ರತಿ ಹಾಜರುಪಡಿಸಿರುತ್ತಾರೆ.

9. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾವು ದಿ.28.8.2017ರಂದು ದೊಡ್ಡಬಳ್ಳಾಪುರ ತಾಲ್ಲೂಕು ತಿಮ್ಮಸಂದ್ರ ಗ್ರಾಮದಲ್ಲಿ ನಿಯೋಜನೆಗೊಂಡು ಕಾರ್ಯನಿರ್ವಹಿಸುತ್ತಿದ್ದಾರೆಂದು, ತಿಮ್ಮಸಂದ್ರ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿಗೆ ಯಾವುದೇ ಸರ್ಕಾರಿ ಕಟ್ಟಡ ಹಾಗೂ ವಸತಿ ಗೃಹ ಲಭ್ಯವಿಲ್ಲದ ಕಾರಣ ಮತ್ತು ತಿಮ್ಮಸಂದ್ರ ಗ್ರಾಮ ತಾಲ್ಲೂಕು ಕೇಂದ್ರದಿಂದ 5 ಕಿ.ಮೀ.ಅಂತರದಲ್ಲಿರುವುದರಿಂದ ತಾಲ್ಲೂಕು ಕಛೇರಿಯ ಹತ್ತಿರ ಒಂದು ಕೊಠಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿದ್ದು, ಹಾಲಿ ಈಗ ತಿಮ್ಮಸಂದ್ರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕೊಠಡಿಯೊಂದನ್ನು ತಮ್ಮ ಕಛೇರಿಗೆ ದಿ.16.11.2017ರಂದು ಪಡೆದು ಬೆಳಿಗ್ಗೆ 10.30ರಿಂದ ಸಂಜೆ 5.30ರವರೆಗೆ ಪ್ರತಿನಿತ್ಯವೂ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ. ತಿಮ್ಮಸಂದ್ರ ವೃತ್ತದಲ್ಲಿ

8

6 ಮಜರೆ ಗ್ರಾಮಗಳು ಬರುತ್ತಿದ್ದು, ಪ್ರತಿ ಗ್ರಾಮಕ್ಕೆ ವಾರದಲ್ಲಿ ಒಂದು ದಿನ ಭೇಟಿ ನೀಡಿ, ತಿಮ್ಮಸಂದ್ರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಕೊಠಡಿಯಲ್ಲಿ ತಾವು ಲಭ್ಯವಿರುವುದಾಗಿ ತಿಳಿಸಿರುತ್ತಾರೆ. 3ನೇ ಎದುರುದಾರರು ತಮ್ಮ ಆಕ್ಷೇಪಣೆಯ ಜೊತೆಗೆ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡದ 6 ಘೋಟೋಗಳನ್ನು, ದಿ.16.11.2017ರಂದು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರು ಒಂದು ಕೊಠಡಿಯನ್ನು ಗ್ರಾಮ ಲೆಕ್ಕಾಧಿಕಾರಿಯವರು ಕಾರ್ಯನಿರ್ವಹಿಸಲು ಬರೆದುಕೊಟ್ಟ ಪತ್ರದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

10. ದೂರು, ಆಕ್ಷೇಪಣೆ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಪ್ರಸ್ತುತ ದೂರನ್ನು ದಿ.6.2.2018ರಂದು ದಾಖಲಿಸಿರುತ್ತಾರೆ. ದೂರಿನಲ್ಲಿ ತಾವು ದಿ.15.9.2017ರಂದು 1ನೇ ಎದುರುದಾರರಿಗೆ 3ನೇ ಎದುರುದಾರರು ತಿಮ್ಮಸಂದ್ರ ಗ್ರಾಮದ ಕೇಂದ್ರಸ್ಥಾನದಲ್ಲಿ ಕರ್ತವ್ಯನಿರ್ವಹಿಸುತ್ತಿಲ್ಲವೆಂದು ದೂರು ನೀಡಿದ ನಂತರ 1ನೇ ಎದುರುದಾರರು ದಿ.9.11.2017ರಂದು ತಮ್ಮ ಕಛೇರಿಯ ಆದೇಶದ; ಸಿಬ್ಬಂದಿ.ಸಿಆರ್.77/17–18ರಂತೆಎಲ್ಲ ಸಿಬ್ಬಂದಿಗಳು ತಮ್ಮ ಕೇಂದ್ರ ಸ್ಥಾನದಲ್ಲಿ ಕಡ್ಡಾಯವಾಗಿ ಕಾರ್ಯನಿರ್ವಹಿಸುತ್ತಾ ಸಾರ್ವಜನಿಕರಿಗೆ ಲಭ್ಯವಾಗಬೇಕೆಂದು ಆದೇಶಿಸಿದ್ದರೂ 3ನೇ ಎದುರುದಾರರು 1ನೇ ಎದುರುದಾರರ ಆದೇಶವನ್ನು ಪಾಲಿಸದೆ ಕೇಂದ್ರಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುತ್ತಿಲ್ಲ ಎಂದು ಆಪಾದಿಸಿರುತ್ತಾರೆ. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ.28.8.2017ರಂದು ತಿಮ್ಮಸಂದ್ರ ಗ್ರಾಮದ ಗ್ರಾಮಲೆಕ್ಕಾಧಿಕಾರಿಯಾಗಿ ನಿಯೋಜನೆಗೊಂಡಿದ್ದು, ಆದರೆ ಸದರಿ ಗ್ರಾಮದಲ್ಲಿ ಗ್ರಾಮ ಲೆಕ್ಕಿಗರಿಗೆ ವಸತಿ ಗೃಹವಾಗಲೀ ಕಛೇರಿಗಾಗಲೀ ಸರ್ಕಾರಿ ಕಟ್ಟಡ ಲಭ್ಯವಿರುವುದಿಲ್ಲ ಎಂದು ತಿಳಿಸಿರುತ್ತಾರೆ.

11. ಕೇಂದ್ರಸ್ಥಾನದಲ್ಲಿ ಕಛೇರಿಗೆ ಮತ್ತು ವಸತಿ ಗೃಹ ಇರದೇ ಇದ್ದರೆ ಸದರಿ ನೌಕರರು ಸದರಿ ಗ್ರಾಮದಲ್ಲಿರುವ ಕೊಠಡಿಯನ್ನು ಬಾಡಿಗೆಗೆ ಪಡೆದುಕೊಂಡು ಕೇಂದ್ರಸ್ಥಾನದಲ್ಲಿಯೇ ಇದ್ದು ಕಾರ್ಯನಿರ್ವಹಿಸಬೇಕು ಮತ್ತು ಸಾರ್ವಜನಿಕರಿಗೆ ಯಾವಾಗಲೂ ಕೇಂದ್ರಸ್ಥಾನದಲ್ಲಿ ಲಭ್ಯವಿರಬೇಕೆಂದು ನಿಯಮವಾಗಿರುತ್ತದೆ. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾವು ಕೇಂದ್ರಸ್ಥಾನದಲ್ಲಿ ವಾಸವಿರುತ್ತಾರೆಂಬುದರ ಬಗ್ಗೆ ತಿಳಿಸಿರುವುದಿಲ್ಲ. ಆದರೆ ದಿ.16.11.2017ರಿಂದ ಬೆಳಿಗ್ಗೆ 10.30ರಿಂದ ಸಂಜೆ 5.30ರವರೆಗೆ ತಿಮ್ಮಸಂದ್ರ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಂದು ತಿಳಿಸಿರುತ್ತಾರೆ. ಉಳಿದ ಸಮಯದಲ್ಲಿ 3ನೇ ಎದುರುದಾರರು ಎಲ್ಲಿ ಇರುತ್ತಾರೆಂಬುದರ ಬಗ್ಗೆ ತಿಳಿಸಿರುವುದಿಲ್ಲ. ಕೆ.ಸಿ.ಎಸ್ ಆರ್.ನಿಯಮ 14ರ ಪ್ರಕಾರ:

> *"the headquarters of Govt. servant are either the station which has been declared to be his headquarters by the authority competent to prescribe his headquarters for the purpose of travelling allowance or in the absence of such declaration, the station where the records of his office are kept."*
>
> *It is the general rule that the Government Servant shall not leave the Headquarters without prior permission of the authority competent to sanction the casual leave."*

12. ಪ್ರಸ್ತುತ ದೂರಿನಲ್ಲಿ ದಿ.28.8.2017ರಂದು 3ನೇ ಎದುರುದಾರರನ್ನು ತಿಮ್ಮಸಂದ್ರ ವೃತ್ತದ ಗ್ರಾಮ ಲೆಕ್ಕಾಧಿಕಾರಿಯಾಗಿ ನಿಯೋಜಿಸಿ, ದೊಡ್ಡಬಳ್ಳಾಪುರ ತಹಶೀಲ್ದಾರರು ತಮ್ಮ ಅಧಿಕೃತ ಜ್ಞಾಪನ ಪತ್ರವನ್ನು ಹೊರಡಿಸಿರುತ್ತಾರೆ. ಆದ್ದರಿಂದ 3ನೇ ಎದುರುದಾರರು ಕಾರ್ಯನಿರ್ವಹಿಸುವ ಕೇಂದ್ರ ಸ್ಥಾನ ತಿಮ್ಮಸಂದ್ರ ಗ್ರಾಮವಾಗಿದ್ದು, ಸದರಿಯವರು ತಿಮ್ಮಸಂದ್ರ ಗ್ರಾಮದಲ್ಲಿಯೇ ಕಾರ್ಯನಿರ್ವಹಿಸಬೇಕಾಗುತ್ತದೆ. ಎದುರುದಾರರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ 3ನೇ ಎದುರುದಾರರು ತಿಮ್ಮಸಂದ್ರ ಗ್ರಾಮದಲ್ಲಿ ವಾಸವಿರುವುದು ಕಂಡುಬರುವುದಿಲ್ಲ. ಆದ್ದರಿಂದ 3ನೇ ಎದುರುದಾರರು ಕೆ.ಸಿ.ಎಸ್.ನಿಯಮಗಳನ್ನು ಉಲ್ಲಂಘನೆ ಮಾಡಿಕರ್ತವ್ಯ ಲೋಪವೆಸಗಿರುವುದು ಕಂಡುಬರುತ್ತದೆ.

13. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 3ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಡಿಯಲ್ಲಿ 3ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು **ಉಪಲೋಕಾಯುಕ್ತರಿಗೆ** ವಹಿಸಬೇಕೆಂದೂ ಕೋರಲಾಗಿದೆ.

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

15. ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ಸಾರ್ವಜನಿಕ/ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಡಿಯಲ್ಲಿ ಅಡಿಯಲ್ಲಿ ಆ.ಸ.ನೌ.ರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಹಿಸಿ ಆದೇಶ ಮಾಡಿದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

2. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 06/08/2019 ರಂದು ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

3. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

4. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

5. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ತಹಶೀಲ್ದಾರ್ ರವರು ತಮ್ಮ ಅಧೀಕೃತ ಜ್ಞಾಪನ ದಿನಾಂಕ: 28/08/2017 ರಂತೆ ತನಗೆ ತಿಮ್ಮಸಂದ್ರ ವೃತ್ತದ ಪ್ರಭಾರವನ್ನು ಶ್ರೀ. ನರಸಿಂಹಮೂರ್ತಿ, ಗ್ರಾಮ ಲೆಕ್ಕಾಧಿಕಾರಿಗಳು, ವೀರಾಪುರ ರವರಿಂದ ಪಡೆದು ಕಾರ್ಯನಿರ್ವಹಿಸಲು ಸೂಚಿಸಿರುತ್ತಾರೆ. ಮುಂದುವರೆದು, ಇದಾದ ಕೆಲವೇ ದಿನಗಳಲ್ಲಿ ಅಂದರೆ ದಿನಾಂಕ: 01/09/2017 ರಂದು ಶ್ರೀ. ರಾಜಶೇಖರ್, ಗ್ರಾಮ ಲೆಕ್ಕಾಧಿಕಾರಿ, ಮರೆಯನಹಳ್ಳಿ ವೃತ್ತ ಇವರು 15 ದಿನಗಳ ಕಾಲ ವೈದ್ಯಕೀಯ ರಜೆಗಾಗಿ ಅರ್ಜಿ ಸಲ್ಲಿಸಿದ ಕಾರಣ ತಹಶೀಲ್ದಾರ್ ರವರು ಅಧೀಕೃತ ಜ್ಞಾಪನವನ್ನು ಹೊರಡಿಸಿ ಸದರಿ ಶ್ರೀ. ರಾಜಶೇಖರ್ ರವರು ನಿರ್ವಹಿಸುತ್ತಿದ್ದ ತಳಗವಾರ ಮತ್ತು ಮರೆಯನಹಳ್ಳ ಕಂದಾಯ ವೃತ್ತವನ್ನು ತಾತ್ಕಾಲಿಕ ಪ್ರಭಾರವನ್ನು ವಹಿಸಿಕೊಳ್ಳುವಂತೆ ತನಗೆ ಆದೇಶಿಸಿದ ಕಾರಣ ಆದೇಶದ ಪರಿಣಾಮ ದಿನಾಂಕ: 27/09/2019 ರವರೆಗೆ ಸದರಿ ವೃತ್ತಗಳ ಪ್ರಭಾರವನ್ನು ನಿರ್ವಹಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ಅದ್ದರಿಂದ, ತಿಮ್ಮಸಂದ್ರ ವೃತ್ತದ ಪ್ರಭಾರವನ್ನು ವಹಿಸಿಕೊಂಡಾಗಿನಿಂದಲೂ ಕೂಡ ತನಗೆ ತಿಮ್ಮಸಂದ್ರ ವೃತ್ತದಲ್ಲಿ/ಕೇಂದ್ರ ಸ್ಥಾನದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಲು ಅಥವಾ ವಾಸಿಸಲು ಅವಕಾಶ ದೊರೆತಿಲ್ಲವೆಂದು ಹೇಳಿರುತ್ತಾರೆ.

6. ಮುಂದುವರೆದು, ಈ ಮಧ್ಯೆ ತಿಮ್ಮಸಂದ್ರ ಮಜರೆ ಗ್ರಾಮ ಗಡ್ಡಂಬಚ್ಚಹಳ್ಳಿ ವಾಸಿಯಾದ ದೂರುದಾರರಾದ ಶ್ರೀ. ಜಿ.ಎಂ ರಾಜಣ್ಣ ಎಂಬುವರು, ಮಾನ್ಯ ತಹಶೀಲ್ದಾರರಿಗೆ ದಿನಾಂಕ 15/09/2017 ರಂದು ಮನವಿಯೊಂದನ್ನು ಸಲ್ಲಿಸಿ ತಿಮ್ಮಸಂದ್ರ ವೃತ್ತದ ಗ್ರಾಮ ಲೆಕ್ಕಿಗರು, ಕೇಂದ್ರಸ್ಥಾನದಲ್ಲಿ ವಾಸ ಇರುವಂತೆ ಕೋರಿರುತ್ತಾರೆ. ಪರಿಣಾಮವಾಗಿ ರಾಜಸ್ವ ನಿರೀಕ್ಷಕರು ದಿನಾಂಕ: 07/10/2017 ರಂದು ತಿಳುವಳಿಕೆ ಪತ್ರವನ್ನು ನೀಡಿ ಕೇಂದ್ರಸ್ಥಾನ ಹಾಗೂ ಪ್ರವಾಸದ

ಬಗ್ಗೆ ವರದಿ ನೀಡುವಂತೆ ಕೋರಿರುತ್ತಾರೆ. ಅದಕ್ಕನುಗುಣವಾಗಿ ದಿನಾಂಕ 13/10/2017 ರಂದು ನನ್ನ ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯನ್ನು ರಾಜಸ್ವ ನಿರೀಕ್ಷಕರು ದಿನಾಂಕ 28/10/2017 ರಂದು ಮಾನ್ಯ ತಹಶೀಲ್ದಾರರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ. ಆದರೆ ಮಾನ್ಯ ತಹಶೀಲ್ದಾರರು ನನ್ನ ವರದಿಯನ್ನು ಪರಿಗಣಿಸದೆ ದಿನಾಂಕ 09/11/2017 ರಂದು ಕೇಂದ್ರಸ್ಥಾನದಲ್ಲಿದ್ದು ಸಾರ್ವಜನಿಕರಿಗೆ ಲಭ್ಯವಿರಬೇಕಾಗಿ ಆದೇಶಿಸಿರುತ್ತಾರೆಯೇ ಹೊರತು ಸರ್ಕಾರಿ ಕಟ್ಟಡಗಳನ್ನು ಒದಗಿಸುವ ಕುರಿತಾಗಲೀ ಅಥವಾ ನನಗೆ ಕೇಂದ್ರ ಪ್ರಭಾರವನ್ನು ವಹಿಸಿಕೊಡುವ ಕುರಿತು ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಸದರಿ ವರದಿ ಮತ್ತು ಆದೇಶದ ಪ್ರತಿಗಳನ್ನು ಮಾನ್ಯ ವಿಚಾರಣಾಧಿಕಾರಿಗಳಾದ ತಮ್ಮ ಅವಗಾಹನೆಗಾಗಿ ಇದರೊಂದಿಗೆ ಲಗತ್ತಿಸಿದೆ. ವಸ್ತುಸ್ಥಿತಿ ಹೀಗಿರುವಾಗ ದಿನಾಂಕ 06/02/2018 ದೂರುದಾರರಾದ ಶ್ರೀ. ಜಿ.ಎಂ ರಾಜಣ್ಣ ರವರು ನನ್ನ ವಿರುದ್ಧ ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿಲ್ಲದಿರುವುದಾಗಿ ಮಾನ್ಯ ಉಪ-ಲೋಕಾಯುಕ್ತರಿಗೆ ಸುಳ್ಳು ದೂರನ್ನು ದಾಖಲಿಸಿರುತ್ತಾರೆ. ದೂರುದಾರರು ತಮ್ಮ ದೂರಿನಲ್ಲಿ ಗ್ರಾಮ ಲೆಕ್ಕಾಧಿಕಾರಿಗಳಿಗೆ ತಿಮ್ಮಸಂದ್ರ ವೃತ್ತದ ದಾಖಲೆ ಗ್ರಾಮವಾದ ಗಡ್ಡಂಬಚ್ಚಹಳ್ಳಿಯಲ್ಲಿ ತಮ್ಮದೇ ಆದ ಕೊಠಡಿಯೊಂದನ್ನು ನೀಡುವುದಾಗಿ ಪ್ರಸ್ತಾಪ ಮಾಡಿದ್ದರು ಕೂಡ ನನಗೆ ಕೊಠಡಿ ನೀಡುವುದಾಗಿ ಎಂದೂ ತಿಳಿಸಿರುವುದಿಲ್ಲ. ನಾನು ಸದರಿ ವೃತ್ತಕ್ಕೆ ನಿಯೋಜನೆಗೊಂಡ ನಂತರ ಹಲವಾರು ಗ್ರಾಮಸ್ಥರ ಬಳಿ ವಾಸಯೋಗ್ಯ ಮನೆ/ಕೊಠಡಿಯೊಂದನ್ನು ನನಗೆ ನೀಡುವಂತೆ ಕೋರಿಕೊಂಡಿದ್ದು ನಾನು ಕೇಳಿದ ಯಾವ ಗ್ರಾಮಸ್ಥರೂ ಕೂಡ ವಾಸಯೋಗ್ಯ ಮನೆ/ಕೊಠಡಿ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೂ ಕೂಡ ನಾನು ತಿಮ್ಮಸಂದ್ರ ವೃತ್ತದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ತಿಮ್ಮಸಂದ್ರ ವೃತ್ತದಲ್ಲಿ ಸರ್ಕಾರಿ ಕಟ್ಟಡಗಳು ಇಲ್ಲದ ಕಾರಣದಿಂದಾಗಿ ತಿಮ್ಮಸಂದ್ರ ಗ್ರಾಮದ ಸ.ನಂ.147ರಲ್ಲಿ 6.35 ಎ/ಗುಂಟೆ ಪೈಕಿ 0.05 ಗುಂಟೆ ಖರಾಬ್ ಜಾಗವಿದ್ದುದರಿಂದ, ಸರ್ಕಾರದ ಆದೇಶದಂತೆ ಗ್ರಾಮಲೆಕ್ಕಾಧಿಕಾರಿಗಳ ವಸತಿ ಗೃಹಕ್ಕಾಗಿ ತಾಲ್ಲೂಕು ಮೋಜಣಿದಾರರಿಂದ 0.05 ಗುಂಟೆ ಜಮೀನಿನ ನಕಾಶೆ ತಯಾರಿಸಿ ಕಡತದೊಂದಿಗೆ ಮೇಲಧಿಕಾರಿಗಳಿಗೆ ಮಂಜೂರು ಮಾಡಲು ಶಿಫಾರಸ್ಸು ಮಾಡಿದ್ದು, ಸರ್ಕಾರದಿಂದ ಮಂಜೂರಾದ ಕೂಡಲೇ ವಾಸವಿದ್ದು, ಕಾರ್ಯನಿರ್ವಹಿಸುವುದಾಗಿ ಮೇಲಧಿಕಾರಿಗಳ ಗಮನಕ್ಕೆ ತಂದಿರುತ್ತೇನೆ. ಆದ್ದರಿಂದ ಅಲ್ಲಿಯವರೆಗೆ ತಾತ್ಕಾಲಿಕವಾಗಿ ಸಾರ್ವಜನಿಕರಿಗೆ ಮತ್ತು ಅವರ

ದೈನಂದಿನ ಕೆಲಸ-ಕಾರ್ಯಗಳಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ತಿಮ್ಮಸಂದ್ರ ವೃತ್ತದಲ್ಲಿ ಬರುವ ತಿಮ್ಮಸಂದ್ರ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ ಇದರ ವತಿಯಿಂದ ತಿಮ್ಮಸಂದ್ರ ವೃತ್ತದಲ್ಲೇ ಹಾಲು ಉತ್ಪಾದಕರ ಸಂಘದಲ್ಲಿ ಖಾಲಿ ಇರುವ ಕೊಠಡಿಯೊಂದನ್ನು ಪಡೆದು ಕಾರ್ಯನಿರ್ವಹಿಸುತ್ತಿರುತ್ತೇನೆ. ಈ ಕುರಿತಂತೆ ಹಾಲು ಉತ್ಪಾದಕರ ಸಂಘವು ಸಹ ಮಾನ್ಯ ತಹಶೀಲ್ದಾರ್ ರವರಿಗೆ ದಿನಾಂಕ 16/11/2017 ರಂದು ಪತ್ರದ ಮುಖಾಂತರ ಸ್ಪಷ್ಟೀಕರಣ ನೀಡಿರುತ್ತದೆ. ಸದರಿ ಪತ್ರದ ಪ್ರತಿಯನ್ನು ಮತ್ತು ಹಾಲು ಉತ್ಪಾದಕರ ಕೊಠಡಿಯ ಕೆಲವು ಫೋಟೋಗಳನ್ನು ಮಾನ್ಯ ವಿಚಾರಣಾಧಿಕಾರಿಗಳಾದ ತಮ್ಮ ಅವಗಾಹನೆಗಾಗಿ ಇದರೊಂದಿಗೆ ಲಗತ್ತಿಸಿದೆ. ಅಷ್ಟೇ ಅಲ್ಲದೆ ತಿಮ್ಮಸಂದ್ರ ವೃತ್ತವು 10 ಗ್ರಾಮಗಳನ್ನು ಒಳಗೊಂಡಿದ್ದು, ಎಲ್ಲಾ 10 ಗ್ರಾಮಗಳಿಗೂ ಸಹ ವಾರದಲ್ಲಿ ಒಂದು ಅಥವಾ ಎರಡು ದಿನ ಭೇಟಿ ನೀಡಿ ಸದರಿ ಗ್ರಾಮಗಳಲ್ಲೇ ಇದ್ದು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸುತ್ತಿರುತ್ತೇನೆ. ಆದರೆ ಈ ಬಗ್ಗೆ ಸಾರ್ವಜನಿಕರಿಂದಲೇ ಅಥವಾ ಇತರೆ ಯಾವುದೇ ವ್ಯಕ್ತಿಗಳಿಂದಾಗಲೀ ನನ್ನ ಕಾರ್ಯ ನಿರ್ವಹಣೆ ವಿಚಾರದಲ್ಲಾಗಲೀ ಅಥವಾ ಸಾರ್ವಜನಿಕರ ದೈನಂದಿನ ಕಾರ್ಯಗಳಿಗೆ ಸಂಬಂಧಿಸಿದಂತಾಗಲಿ ನನ್ನ ವಿರುದ್ಧ ದೂರು ದಾಖಲಾಗಿರುವುದಿಲ್ಲ ಮತ್ತು ಈ ಬಗ್ಗೆ ನಾನು ನನ್ನ ಮೇಲಧಿಕರಿಗಳಿಂದಾಗಲೀ ಅಥವಾ ಇತರೆ ಯಾವುದೇ ಅಧಿಕಾರಿಗಳಿಂದಾಗಲೀ ಯಾವುದೇ ಶಿಸ್ತು ಕ್ರಮಕ್ಕೆ ಗುರಿಯಾಗಿರುವುದಿಲ್ಲ. ನಾನು 2016 ರಲ್ಲಿ ಅಂತರ್ ಜಿಲ್ಲಾ ವರ್ಗಾವಣೆಯಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಭಾರವನ್ನು ವಹಿಸಿಕೊಂಡಾಗಿನಿಂದಲೂ ಮಾನ್ಯ ಜಿಲ್ಲಾಧಿಕಾರಿಗಳು ಶಿವಪುರ ವೃತ್ತವನ್ನು ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದರೂ ಕೂಡ ನನ್ನ ಕೇಂದ್ರಸ್ಥಾನ ವೃತ್ತವಾದ ಶಿವಪುರ ವೃತ್ತದ ಪ್ರಭಾರವನ್ನು ನೀಡಿರುವುದಿಲ್ಲ ಬದಲಾಗಿ ಅನ್ಯ ವ್ಯಕ್ತಿಗಳನ್ನು ಪ್ರಭಾರದ ಮೇಲೆ ನೀಡಿದ್ದಾಗ್ಯೂ ಕೂಡ ಸದರಿ ಪ್ರಭಾರಗಳನ್ನು ಕೇವಲ 15 ದಿನಗಳು ಅಥವಾ ತಿಂಗಳೊಳಗಾಗಿ ಪ್ರಭಾರ ಬದಲಾವಣೆ ಮಾಡುವುದು, ಪ್ರಭಾರವನ್ನು ಮತ್ತೊಬ್ಬರಿಗೆ ವಹಿಸುವುದು ಮತ್ತು ನನ್ನನ್ನು ಪ್ರಭಾರ ರಹಿತನನ್ನಾಗಿ ಮಾಡಿರುವುದರ ಬಗ್ಗೆ ಮೇಲೆ ವಿವರಿಸಿರುತ್ತೇನೆ. ವಸ್ತುಸ್ಥಿತಿ ಹೀಗಿರುವಾಗ ಬದಲಾದ ಸನ್ನಿವೇಶಗಳಿಂದಾಗಿ ಸರ್ಕಾರಿ ನೌಕರನಾದ ನಾನು ಯಾವುದೇ ಒಂದು ವೃತ್ತದ ಕೇಂದ್ರಸ್ಥಾನದಲ್ಲಿ ವಾಸಮಾಡುವುದು ಮತ್ತು ಕಾರ್ಯ ನಿರ್ವಹಿಸುವುದು ಅಸಾಧ್ಯವಾದುದ್ದಾಗಿದೆ. ಆದ್ದರಿಂದ ಪ್ರತಿ

ಭಾರಿ ಪ್ರಭಾರ ಬದಲಾವಣೆಯಾದಾಗಲೂ ವಾಸಸ್ಥಾನ ಬದಲಾಯಿಸಿ ನಿರ್ಧಿಷ್ಟ ಪ್ರಭಾರದಲ್ಲಿ ಕಾರ್ಯನಿರ್ವಹಿಸುವುದು ಕೂಡ ಅಸಾಧ್ಯದ ಮಾತಾಗಿದೆ. ಸರ್ಕಾರಿ ನೌಕರನಾಗಿ ಸೇವಾ ನಿಯಮಗಳನ್ನು ಅನುಸರಿಸಿ ಒಂದು ವೇಳೆ ನಿರ್ಧಿಷ್ಟ ಪ್ರಭಾರದಲ್ಲಿ ವಾಸಿಸಿದರು ಅಥವಾ ಕಾರ್ಯ ನಿರ್ವಹಿಸಿದ್ದಾಗ್ಯೂ ಕೂಡ ಅದನ್ನು ಕೇವಲ 15 ದಿನಗಳಿಗೊಮ್ಮೆ ಅಥವಾ ತಿಂಗಳಿಗೊಮ್ಮೆ ಬದಲಾಯಿಸಬೇಕಾದ ಅನಿವಾರ್ಯತೆ ಕಂಡು ಬಂದಿದ್ದು, ನಾನು ನಿರ್ವಹಿಸುವ ಎಲ್ಲಾ ಕೇಂದ್ರ ಸ್ಥಾನಗಳಲ್ಲು ನಾನು ವಾಸಿಸಲು ಮನೆಯನ್ನು ಹೊಂದಲು ನನಗೆ ಬರುವ ಸಂಬಳದಲ್ಲಿ ಅದು ಅಸಾಧ್ಯವೆಂಬ ವಿಚಾರವನ್ನು ಕೂಡ ತಮ್ಮ ಬಳಿ ನಿವೇದಿಸಿಕೊಳ್ಳುತ್ತಿದ್ದೇನೆ. ಆದ್ದರಿಂದ, ತನ್ನ ಕಡೆಯಿಂದ ಯಾವುದೇ ಕರ್ತವ್ಯ ಲೋಪ ಆಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು ರವರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ತಮ್ಮ ಸಾಕ್ಷ್ಯ ನುಡಿಸಿಕೊಂಡು, ನಿ.ಡಿ.1 ರಿಂದ 21 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

8. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

9. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

10. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

12. ದೋಷಾರೋಪಣೆಯ ಪ್ರಕಾರ ಆ.ಸ.ನೌರವರು ದೊಡ್ಡಬಳ್ಳಾಪುರ ತಾಲ್ಲೂಕು ತಿಮ್ಮಸಂದ್ರ ವೃತ್ತದ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ದಿನಾಂಕ: 28/08/2017 ರಿಂದ 15/11/2018 ರ ಸಂಜೆ 5.30 ರವರೆಗೆ ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸಿರುವುದಿಲ್ಲ. ಹೀಗೆ ಆ.ಸ.ನೌರವರು ಕೇಂದ್ರ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸದೇ ಇದ್ದ ಕಾರಣ ಗ್ರಾಮಸ್ಥರಿಗೆ ತುಂಬಾ ತೊಂದರೆಯಾಗಿರುತ್ತದೆ. ಗ್ರಾಮಸ್ಥರು ತಮ್ಮ ಕೆಲಸಕ್ಕಾಗಿ ಬಂದಾಗ ಆ.ಸ.ನೌರವರು ಯಾರಿಗೂ ಸಿಗದೇ ಕೇಂದ್ರ ಸ್ಥಳದಲ್ಲಿ ಇರದೇ ಕರ್ತವ್ಯ ಲೋಪ ಎಸಗಿರುತ್ತಾರೆ ಎಂದು ದೋಷಾರೋಪಣೆ ಮಾಡಲಾಗಿದೆ.

13. ದೂರುದಾರರಾದ ಶ್ರೀ. ಜಿ.ಎಂ ರಾಜಣ್ಣ ಬಿನ್ ಎ ಮುನೆಗೌಡ, ಗಡ್ಡಂಬಚ್ಚಹಳ್ಳಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ತಮ್ಮ ದೂರಿನಲ್ಲಿ ಆ.ಸ.ನೌರವರು ತಿಮ್ಮಸಂದ್ರ ವೃತ್ತದ ಗ್ರಾಮ ಲೆಕ್ಕಾಧಿಕಾರಿಯಾಗಿದ್ದು, ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವುದಿಲ್ಲ ಎಂದು ದಿನಾಂಕ: 15/09/2017 ರಂದು ತಹಶೀಲ್ದಾರ್ ದೊಡ್ಡಬಳ್ಳಾಪುರ ರವರಿಗೆ ದೂರನ್ನು ನೀಡಿದ್ದು ಇರುತ್ತದೆ. ತಹಶೀಲ್ದಾರ್‌ರವರು ಸದರಿ ದೂರಿನ ಅನ್ವಯ ರಾಜಸ್ವ ನಿರೀಕ್ಷಕರು ಕಸಬಾ ಹೋಬಳಿ-2, ದೊಡ್ಡಬಳ್ಳಾಪುರ ಇವರಿಗೆ ದೂರುದಾರರು

8

ಮಾಡಿದ ಆಪಾದನೆ ಬಗ್ಗೆ ವರದಿಯನ್ನು ಪಡೆದುಕೊಂಡು ಮಾಹಿತಿಯನ್ನು ನೀಡಲು ತಿಳಿಸಿದ್ದು ಇರುತ್ತದೆ.

14. ರಾಜಸ್ವ ನಿರೀಕ್ಷರು ಆ.ಸ.ನೌರವರಿಗೆ ನೋಟಿಸ್‌ನ್ನು ನೀಡಿ, ಅವರಿಂದ ವಿವರಣೆಯನ್ನು ಪಡೆದುಕೊಂಡು ದಿನಾಂಕ: 28/10/2017 ರಂದು ತಹಶೀಲ್ದಾರ್ ರವರಿಗೆ ಆ.ಸ.ನೌರವರ ಕಾರ್ಯವೈಖರಿಯ ಬಗ್ಗೆ ವರದಿಯನ್ನು ಸಲ್ಲಿಸಿರುತ್ತಾರೆ. ದಿನಾಂಕ: 09/11/2017 ರಂದು ತಹಶೀಲ್ದಾರ್ ರವರು ಎಲ್ಲಾ ಸಿಬ್ಬಂದಿಗಳಿಗೆ ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸಬೇಕೆಂದು ಆದೇಶಿಸಿದ್ದರೂ, ಅ.ಸ.ನೌ ರವರು ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರಲ್ಲಿಲ್ಲ ಎಂದು, ಇದರಿಂದ ಗ್ರಾಮಸ್ಥರಿಗೆ ತುಂಬಾ ತೊಂದರೆಯಾಗುತ್ತದೆ, ಗ್ರಾಮಸ್ಥರು ತಮ್ಮ ಕೆಲಸಕ್ಕಾಗಿ ಬಂದಾಗ ಆ.ಸ.ನೌ ರವರು ಯಾರಿಗೂ ಸಿಗುತ್ತಿಲ್ಲ. ಆದ್ದರಿಂದ ಆ.ಸ.ನೌ ರವರ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

15. ಆ.ಸ.ನೌರವರ ತಮ್ಮ ಲಿಖಿತ ಹೇಳಿಯಲ್ಲಿ/ಆಕ್ಷೇಪಣೆಯಲ್ಲಿ ದಿನಾಂಕ: 28/08/2017 ರಂದು ದೊಡ್ಡಬಳ್ಳಾಪುರ ತಿಮ್ಮಸಂದ್ರ ಗ್ರಾಮದಲ್ಲಿ ನಿಯೋಜನೆಗೊಂಡು ಕಾರ್ಯನಿರ್ವಹಿಸುತ್ತಿದ್ದು, ಸದರಿ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳಿಗೆ ಯಾವುದೇ ಸರ್ಕಾರಿ ಕಟ್ಟಡ ಹಾಗೂ ವಸತಿ ಗೃಹ ಲಭ್ಯವಿಲ್ಲದ ಕಾರಣ ಮತ್ತು ತಿಮ್ಮಸಂದ್ರ ಗ್ರಾಮ ತಾಲ್ಲೂಕು ಕೇಂದ್ರದಿಂದ 5 ಕಿಲೋ ಮೀಟರ್ ಅಂತರದಲ್ಲಿರುವುದರಿಂದ ತಾಲ್ಲೂಕು ಕಛೇರಿಯ ಹತ್ತಿರ ಒಂದು ಕೊಠಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿದ್ದು, ಹಾಲಿ ಈಗ ತಿಮ್ಮಸಂದ್ರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕೊಠಡಿಯೊಂದನ್ನು ತಮ್ಮ ಕಛೇರಿಗೆ ದಿನಾಂಕ: 16/11/2017 ರಂದು ಪಡೆದು ಬೆಳಗ್ಗೆ 10.30 ರಿಂದ ಸಂಜೆ 5.30 ರವರೆಗೆ ಪ್ರತಿದಿನ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

16. ಮುಂದುವರೆದು, ತಿಮ್ಮಸಂದ್ರ ವೃತ್ತದಲ್ಲಿ 6 ಮಜರೆ ಗ್ರಾಮಗಳು ಬರುತ್ತಿದ್ದು, ಪ್ರತಿ ಗ್ರಾಮಕ್ಕೆ ವಾರದಲ್ಲಿ ಒಂದು ದಿನ ಭೇಟಿ ನೀಡಿ, ತಿಮ್ಮಸಂದ್ರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಕೊಠಡಿಯಲ್ಲಿ ತಾವು ಲಭ್ಯವಿರುವುದಾಗಿ ತಿಳಿಸಿರುತ್ತಾರೆ.

17. ದೋಷಾರೋಪಣೆಯಲ್ಲಿ ಹೇಳಿದ ವಿಷಯವನ್ನ ರುಜುವಾತಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿ ಸಾಕ್ಷಿ ಮಾಡಿಸಿರುತ್ತಾರೆ. ತಮ್ಮ ಪರವಾಗಿ ನಿ.ಪಿ.1 ರಿಂದ 4 ನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ.1 ಇದು ತಹಶೀಲ್ದಾರ್, ದೊಡ್ಡಬಳ್ಳಾಪುರ ಇವರು ದಿನಾಂಕ: 09/11/2017 ರಂದು ಹೊರಡಿಸಿದ ಕಛೇರಿ ಆದೇಶದ ಪ್ರತಿ; ನಿ.ಪಿ.2 ಇದು ದೂರು; ನಿ.ಪಿ.3 ಇದು ಫಾರಂ ನಂ.1 ಮತ್ತು ನಿ.ಪಿ.4 ಇದು ಫಾರಂ ನಂ.2.

18. ಪಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ ರವರು ತಿಮ್ಮಸಂದ್ರ ವೃತ್ತದ ಗ್ರಾಮ ಲೆಕ್ಕಾಧಿಕಾರಿಯಾಗಿದ್ದರೂ ಸಹ ದೊಡ್ಡಬಳ್ಳಾಪುರದ ಟೌನ್‌ನಲ್ಲಿರುವ ತಾಲ್ಲೂಕು ಕಛೇರಿ ಮುಂಭಾಗದಲ್ಲಿ ಇರುವ ಲಾಯರ್ ನಾಗರಾಜುರವರ ಕಟ್ಟಡದಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದರು. ಇದರಿಂದ ಎಲ್ಲರಿಗೂ ತೊಂದರೆಯಾಗುತ್ತಿತ್ತು. ಹೀಗಾಗಿ ತಾನು ತಹಶೀಲ್ದಾರ್ ರವರಿಗೆ ಒಂದು ಅರ್ಜಿಯನ್ನು ಕೊಟ್ಟು, ಆ.ಸ.ನೌ ರವರು ಖುದ್ದು ತಿಮ್ಮಸಂದ್ರದಲ್ಲಿ ಕಛೇರಿ ಮತ್ತು ವಾಸ ಮಾಡಿದಲ್ಲಿ ವೃತ್ತದ ನಿವಾಸಿಗಳಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದ್ದೆ. ಆದರೆ ಆ.ಸ.ನೌ ರವರು ಅಲ್ಲಿ ಬಂದು ಕರ್ತವ್ಯ ನಿರ್ವಹಿಸಲಿಲ್ಲ ಮತ್ತು ವಾಸಮಾಡಲಿಲ್ಲ. ಈ ಬಗ್ಗೆ ನಿ.ಪಿ.1ನ್ನು ಹಾಜರು ಮಾಡಿರುತ್ತಾರೆ. ತಹಶೀಲ್ದಾರ್ ದೊಡ್ಡಬಳ್ಳಾಪುರ ರವರು ದಿನಾಂಕ: 09/11/2017 ರಂದು ಆ.ಸ.ನೌ ರವರು ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುವ ಬಗ್ಗೆ ತಿಳಿಸಿದ್ದು, ಆದೇಶದಲ್ಲಿ ರಾಜಸ್ವ ನಿರೀಕ್ಷಕರು ಹಾಗೂ ಆ.ಸ.ನೌ ರವರ ವರದಿಯನ್ನು ಪರಿಶೀಲಿಸಿ, ತಿಮ್ಮಸಂದ್ರ ಕಂದಾಯ ವೃತ್ತದ ಗ್ರಾಮ ಲೆಕ್ಕಾಧಿಕಾರಿಗಳು ದೊಡ್ಡಬಳ್ಳಾಪುರ ನಗರದಲ್ಲಿ ಕಾರ್ಯನಿರ್ವಹಿಸಬೇಕೆಂದು ಸರ್ಕಾರದ ಆದೇಶ ಇರುವುದರಿಂದ, ಆ.ಸ.ನೌ ರವರಿಗೆ ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿದ್ದು

ಸಾರ್ವಜನಿಕರಿಗೆ ಲಭ್ಯವಿದ್ದು ಕಾರ್ಯನಿರ್ವಹಿಸಲು ಸೂಚಿಸಿದೆ ಎಂದು ಆದೇಶ ಮಾಡಿದ್ದು ಇರುತ್ತದೆ.

19. ಪಿ.ಡಬ್ಲ್ಯೂ.1 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ನಂತರ ಆ.ಸ.ನೌರವರ ಕೇಂದ್ರ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸಲು ಕೇಳಿದಾಗ, ಆ.ಸ.ನೌ ರವರು ತಿಮ್ಮಸಂದ್ರದಲ್ಲಿ ಕರ್ತವ್ಯ ನಿರ್ವಹಿಸಲು ತನಗೆ ಸರ್ಕಾರಿ ವಸತಿ ಗೃಹ ಇರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಮುಂದುವರೆದು ಮಾನ್ಯ ಲೋಕಾಯುಕ್ತರು ದೊಡ್ಡಬಳ್ಳಾಪುರಕ್ಕೆ ದಿನಾಂಕ: 06/02/2018 ರಂದು ದೊಡ್ಡಬಳ್ಳಾಪುರದ ಒಕ್ಕಲಿಗರ ಕಲ್ಯಾಣ ಭವನಕ್ಕೆ ಸಮಸ್ಯೆಗಳನ್ನು ಆಲಿಸುವ, ಪರಿಹರಿಸುವ ಕಾರ್ಯಕ್ರಮಕ್ಕೆ ಬಂದಾಗ, ತಾನು ಅವರಿಗೆ ಸ್ಥಳದಲ್ಲಿಯೇ ಲಿಖಿತ ದೂರನ್ನು ನಿ.ಪಿ.2ರ ಪ್ರಕಾರ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ.

20. ಇವರು ತಮ್ಮ ಪಾಟಿಸವಾಲಿನಲ್ಲಿ ಆ.ಸ.ನೌ ರವರ ಪರ ವಕೀಲರು ತಿಮ್ಮಸಂದ್ರದಲ್ಲಿ ಯಾವುದೇ ಕಟ್ಟಡ ಇಲ್ಲದೇ ಇರುವುದರಿಂದ ಆ.ಸ.ನೌ ರವರು ಅಲ್ಲಿಯ ಹಾಲು ಉತ್ಪಾದಕರ ಸಂಘದ ಕಟ್ಟಡದಲ್ಲಿ ಕಛೇರಿ ಕಾರ್ಯ ನಿರ್ವಹಿಸುತ್ತಿದ್ದರು ಎಂದು ಮಾಡಿದ ಸಲಹೆಗೆ ಸಾಕ್ಷಿಯು ಲೋಕಾಯುಕ್ತ ದೂರನ್ನ ಸಲ್ಲಿಸಿದ ನಂತರ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ನುಡಿದಿರುತ್ತಾರೆ. ಆದರೆ ಇದರ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

21. ಮುಂದುವರೆದು, ಪಾಟಿ ಸವಾಲಿನಲ್ಲಿ ತಿಮ್ಮಸಂದ್ರ ವೃತ್ತಕ್ಕೆ ಒಟ್ಟು 10 ಗ್ರಾಮಗಳು ಒಳಪಡುತ್ತವೆ ಎಂದು ಒಪ್ಪಿಕೊಂಡಿರುತ್ತಾರೆ. ಆ.ಸ.ನೌ ರವರು ಈ ಗ್ರಾಮಗಳಿಗೆ ವಾರದಲ್ಲಿ ಒಂದು ಅಥವಾ ಎರಡು ದಿನ ಭೇಟಿ ಕೊಟ್ಟು ಕಾರ್ಯನಿರ್ವಹಿಸುತ್ತಿದ್ದರು ಎಂದು ಒಪ್ಪಿಕೊಂಡಿರುತ್ತಾರೆ. ಆ.ಸ.ನೌ ರವರು ತಿಮ್ಮಸಂದ್ರದಲ್ಲಿ ವಾಸವಿಲ್ಲದೆ ಇದ್ದುದರಿಂದ ತನ್ನ ಕೆಲಸಕ್ಕೆ ತೊಂದರೆ ಆಗಿರುವುದಿಲ್ಲ ಎಂದು ಮಾಡಿದ ಸಲಹೆಗೆ ತನಗೆ ತೊಂದರೆ ಆಗದಿದ್ದರೂ ಸಹಿತ ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ ಎಂದು ನುಡಿದಿರುತ್ತಾರೆ. ಸಾರ್ವಜನಿಕರು ಆ.ಸ.ನೌ ರವರ ವಿರುದ್ಧ

ತಹಶೀಲ್ದಾರ್‌ರಲ್ಲಿ ದೂರನ್ನು ಹೇಳಿರುವುದಿಲ್ಲ ಎಂದು ಮಾಡಿದ ಸಲಹೆಗೆ ತಾನು ದೂರನ್ನು ಸಲ್ಲಿಸಿರುತ್ತೇನೆ ಎಂದು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ.

22.ಆ.ಸ.ನೌ ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷ ನುಡಿದಿದ್ದು, ನಿ.ಡಿ.1 ರಿಂದ ನಿ.ಡಿ.21 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ತನ್ನ ಲಿಖಿತ ಹೇಳಿಕೆಯಲ್ಲಿ ಹೇಳಿದ ವಿಷಯವನ್ನೇ ಹೇಳಿರುತ್ತಾರೆ. ನಿ.ಡಿ.1 ರಿಂದ ನಿ.ಡಿ.11 ಈ ದಾಖಲಾತಿಗಳು ಈ ವಿಚಾರಣೆಗೆ ಸಂಬಂಧಪಟ್ಟ ದಾಖಲೆಗಳು ಇರುವುದಿಲ್ಲ. ಈ ದಾಖಲಾತಿಗಳು ಆ.ಸ.ನೌ ರವರು ತಮಗೆ ನೇಮಕಾತಿ ಆದನಂತರ ತಿಮ್ಮಸಂದ್ರ ಗ್ರಾಮದ ಕರ್ತವ್ಯವನ್ನು ವಹಿಸಿಕೊಳ್ಳುವುದಕ್ಕಿಂತ ಮೊದಲಿನದು ಇರುತ್ತದೆ.

23.ನಿ.ಡಿ.12 ಇದು ತಿಮ್ಮಸಂದ್ರ ಗ್ರಾಮದ ಚಾರ್ಜನ್ನು ವಹಿಸಿಕೊಳ್ಳುವ ಬಗ್ಗೆ ಇರುತ್ತದೆ. ನಿ.ಡಿ.13 ಇದು ದೂರುದಾರರು ತಹಶೀಲ್ದಾರ್ ದೊಡ್ಡಬಳ್ಳಾಪುರ ಇವರಿಗೆ ದಿನಾಂಕ: 15/09/2017 ರಂದು ಸಲ್ಲಿಸಿದ ಮನವಿ ಪತ್ರದ ಪ್ರತಿ ಇರುತ್ತದೆ. ಸದರಿ ಮನವಿ ಪ್ರತಿಯನ್ನು ಪರಿಶೀಲಿಸಿದಾಗ ಅದರಲ್ಲಿ ಆ.ಸ.ನೌ ರವರು ತಿಮ್ಮಸಂದ್ರ ಗ್ರಾಮದ ಚಾರ್ಜನ್ನು ವಹಿಸಿಕೊಂಡಾಗಿನಿಂದಲೂ ದೊಡ್ಡಬಳ್ಳಾಪುರದ ತಾಲ್ಲೂಕು ಕಛೇರಿಯ ಮುಂದೆ ನಾಗರಾಜು ರವರ ಕಟ್ಟಡದಲ್ಲಿ ಕೋಣೆ ಮಾಡಿಕೊಂಡಿರುತ್ತಾರೆ. ತಿಮ್ಮಸಂದ್ರ ಅಥವಾ ಗಡ್ಡಂಬಟ್ಟಹಳ್ಳಿ ಗ್ರಾಮದಲ್ಲಿ ಇರಲು ಬಾಡಿಗೆ ಇಲ್ಲದಂತೆ ನಿವೇಶನ ನೀಡಲು ಸಾರ್ವಜನಿಕರು ಸಿದ್ದರಿದ್ದು, ಇಲ್ಲದಿದ್ದರೆ ತನ್ನ ಸ್ವಂತ ಮನೆಯನ್ನು ಅದನ್ನು ಉಚಿತವಾಗಿ ಕಛೇರಿ ಕೆಲಸಕ್ಕೆ ನೀಡುತ್ತೇನೆ ಎಂದು ಮನವಿ ಮಾಡಿಕೊಂಡಿರುತ್ತಾರೆ.

24.ನಿ.ಡಿ.14 ಇದು ರಾಜಸ್ವ ನಿರೀಕ್ಷಕರು ಆ.ಸ.ನೌ ರವರಿಗೆ ದೂರುದಾರು ಸಲ್ಲಿಸಿದ ದೂರಿನ ಬಗ್ಗೆ ತಿಳಿಸಿ, ಆ.ಸ.ನೌ ರವರು ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಸ್ಥಾನದ ಸ್ಥಳದ ಬಗ್ಗೆ ಹಾಗೂ ವಿಳಾಸದ ಬಗ್ಗೆ ವಿವರಣೆ ನೀಡಲು ಕೇಳಿಕೊಂಡಿರುತ್ತಾರೆ.

25.ನಿ.ಡಿ.15 ಇದು ರಾಜಸ್ವ ನಿರೀಕ್ಷಕರು ವರದಿ ಇದ್ದು, ಈ ವರದಿಯ ಪ್ರಕಾರ ಆ.ಸ.ನೌ ರವರು ನಿ.ಡಿ.14 ರ ತಿಳುವಳಿಕೆ ಉತ್ತರದಲ್ಲಿ ಲಿಖಿತವಾಗಿ ತಿಳಿಸದ ವಿಷಯದ ಬಗ್ಗೆ ಹೇಳಿದ್ದು, ಅದರಲ್ಲೂ ತಿಮ್ಮಸಂದ್ರ ವೃತ್ತಕ್ಕೆ ಒಳಪಡುವ ಗ್ರಾಮಗಳು ದೊಡ್ಡಬಳ್ಳಾಪುರ ನಗರಕ್ಕೆ ಹೊಂದಿಕೊಂಡಂತೆ ಇದ್ದು, ಎಲ್ಲಾ ಗ್ರಾಮಸ್ಥರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ದೊಡ್ಡಬಳ್ಳಾಪುರ ನಗರದಲ್ಲಿ ಕಛೇರಿಯನ್ನು ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೇ, ತಿಮ್ಮಸಂದ್ರ ಗ್ರಾಮದ ಸರ್ವೆ ನಂ.147 ರಲ್ಲಿ 0.05 ಗುಂಟೆ ಜಮೀನನ್ನು ಗ್ರಾಮ ಲೆಕ್ಕಿಗರ ವಸತಿ ಗೃಹ ಹಾಗೂ ಕಛೇರಿಗೆ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುವುದಾಗಿ, ಸದರಿ ಜಮೀನಿನಲ್ಲಿ ಕಛೇರಿಯನ್ನು ನಿರ್ಮಿಸಿಕೊಟ್ಟಲ್ಲಿ ಕೇಂದ್ರ ಸ್ಥಾನದಲ್ಲಿ ವಾಸವಿದ್ದು, ಕರ್ತವ್ಯ ನಿರ್ವಹಿಸುವುದಾಗಿ ಆ.ಸ.ನೌ ರವರು ಸಲ್ಲಿಸಿರುತ್ತಾರೆ.

26.ನಿ.ಡಿ.16 ಇದು ಆ.ಸ.ನೌ ರವರು ರಾಜಸ್ವ ನಿರೀಕ್ಷಕರಿಗೆ ಸಲ್ಲಿಸಿದ ವರದಿ ಇದ್ದು, ಇದರ ಬಗ್ಗೆ ಈಗಾಗಲೇ ನಿ.ಡಿ.15ರಲ್ಲಿ ಹೇಳಿರುತ್ತಾರೆ. ನಿ.ಡಿ.17 ಮತ್ತು 18 ಇದು ತಹಶೀಲ್ದಾರ್ ರವರು ಮಾಡಿದ ಟಿಪ್ಪಣಿ ಮತ್ತು ಆದೇಶದ ಪ್ರತಿ ಇರುತ್ತದೆ. ನಿ.ಡಿ.18 ಹಾಗೂ ನಿ.ಪಿ.1 ಇವು ಒಂದೇ ಆಗಿದ್ದು, ಇದರ ಬಗ್ಗೆ ಈಗಾಗಲೇ ಮೇಲೆ ಹೇಳಿದ್ದು ಇರುತ್ತದೆ. ನಿ.ಡಿ.12 ರಿಂದ ನಿ.ಡಿ.18 ರವರೆಗಿನ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆ.ಸ.ನೌ ರವರು ತಿಮ್ಮಸಂದ್ರದ ಗ್ರಾಮ ಲೆಕ್ಕಿಗ ಹುದ್ದೆಯ ಚಾರ್ಜ್ ವಹಿಸಿಕೊಂಡ ದಿನಾಂಕದಿಂದ ಅಂದರೆ ದಿನಾಂಕ: 23/08/2017 ರಿಂದ 09/11/2017 ರವರೆಗೆ ತಿಮ್ಮಸಂದ್ರದಲ್ಲಿ ಕೆಲಸ ನಿರ್ವಹಿಸುವುದಿಲ್ಲ ಎಂದು ಕಂಡು ಬರುತ್ತದೆ.

27.ಆ.ಸ.ನೌ ರವರ ಪ್ರಕಾರ ತಹಶೀಲ್ದಾರ್ ರವರು ಕೇಂದ್ರ ಸ್ಥಾನದಲ್ಲಿ ಕೆಲಸವನ್ನು ಮಾಡಲು ಆದೇಶಿಸಿದ ನಂತರ ತಾನು ತಿಮ್ಮಸಂದ್ರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತದಲ್ಲಿ ಒಂದು ಕೊಠಡಿಯನ್ನು ಪಡೆದು ದಿನಾಂಕ: 16/11/2017 ರಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ ಎಂದು ಹೇಳಿರುತ್ತಾರೆ (ಅಂದರೆ ತಹಶೀಲ್ದಾರ್ ರವರು ನಿರ್ದೇಶನ ನೀಡಿದ ನಂತರ). ಆದರೆ ದೂರುದಾರರ ಪ್ರಕಾರ ಈ ಸಂಸ್ಥೆಗೆ ತಾನು ದೂರನ್ನು ಸಲ್ಲಿಸಿದ ನಂತರ ಆ.ಸ.ನೌರವರು ಹಾಲು ಉತ್ಪಾದಕರ ಸಂಘದಲ್ಲಿ ಕೆಲಸ ಮಾಡುತ್ತಿದ್ದಾರೆ ಅಂತಾ ನುಡಿದಿರುತ್ತಾರೆ.

28.ಆ.ಸ.ನೌ ರವರು ತಾನು ಹಾಲು ಉತ್ಪಾದಕರ ಸಂಘದವರು ನೀಡಿದ ಕೊಠಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಹೇಳಲು ಶ್ರೀ. ಎಂ ಬಾಲರಾಜು ಇವರನ್ನು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ಮಾಡಿಸಿದ್ದು, ನಿ.ಡಿ.22 ಮತ್ತು 23 ಗಳನ್ನು ಗುರುತಿಸಿಕೊಂಡಿರುತ್ತಾರೆ. ಇವರು ತಮ್ಮ ಸಾಕ್ಷಿಯ ರೂಪದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಪ್ರಮಾಣ ಪತ್ರದಲ್ಲಿ ತಾನು 2015ನೇ ಇಸವಿಯಿಂದ 2019ನೇ ಇಸವಿಯವರೆಗೆ ಸದರಿ ಸಂಘದ ಅಧ್ಯಕ್ಷನಾಗಿದ್ದು, ಆ.ಸ.ನೌ ರವರ ವಿನಂತಿಯ ಮೇರೆಗೆ ಕಾರ್ಯದರ್ಶಿಗಳು ಹಾಗೂ ಸದಸ್ಯರ ಜೊತೆಗೆ ವಿಚಾರಣೆ ಮಾಡಿ ಕೊಠಡಿಯನ್ನು ಕೊಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ಸದರಿ ಸಂಘದ ಲೆಟರ್ ಹೆಡ್‌ನಲ್ಲಿ ನೀಡಿರುವ ದಾಖಲೆಯನ್ನು ಹಾಜರುಪಡಿಸಿರುತ್ತಾರೆ. ಅಲ್ಲದೇ, ಸಂಘದ ಕಟ್ಟಡಗಳ ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತಾರೆ. ಆದರೆ, ನಿ.ಡಿ.22ರ ಪೂರಕವಾಗಿ ಸದರಿ ಸಂಘದ ಠರಾವು ಆಗಲೀ ಅಥವಾ ಸಂಘದ ನಡವಳಿಕೆಗಳನ್ನು ಹಾಜರುಪಡಿಸಿರುವುದಿಲ್ಲ. ಆ.ಸ.ನೌ ರವರು ಹಾಲು ಉತ್ಪಾದಕರ ಸಂಘದ ಕೊಠಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ತಹಶೀಲ್ದಾರ್ ರವರ ಗಮನಕ್ಕೆ ತಂದಿರುತ್ತಾರೋ ಇಲ್ಲವೋ ತಿಳಿಸಿರುವುದಿಲ್ಲ. ಅಲ್ಲದೇ ತಹಶೀಲ್ದಾರ್‌ರವರಿಂದ ಈ ಬಗ್ಗೆ ಯಾವುದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲ. ಹಾಲು ಉತ್ಪಾದಕರ ಸಂಘದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ತಮ್ಮ ಮೇಲಾಧಿಕಾರಿಗಳಾದ ತಹಶೀಲ್ದಾರ್‌ರವರಿಗೆ ತಿಳಿಸುವುದು ಆ.ಸ.ನೌರವರ ಕರ್ತವ್ಯವಾಗಿರುತ್ತದೆ. ತಹಶೀಲ್ದಾರ್ ರವರು ಪರವಾನಿಗೆ ನೀಡಿದರೆ ಮಾತ್ರ ಅಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ದೂರುದಾರರು ಹೇಳಿದ ಹಾಗೆ ಈ ಸಂಸ್ಥೆಗೆ ದೂರನ್ನ ಸಲ್ಲಿಸಿದ ನಂತರ ನಿ.ಡಿ.22 ಮತ್ತು 23 ನ್ನು ತಯಾರಿಸಲಾಗಿದೆ ಅಂತಾ ಕಂಡು ಬರುತ್ತದೆ. ದೋಷಾರೋಪಣೆ ವಿವರ ಅನುಬಂಧ-2ರ ಪ್ರಕಾರ "ಕೇಂದ್ರಸ್ಥಾನದಲ್ಲಿ ಕಛೇರಿಗೆ ಮತ್ತು ವಸತಿ ಗೃಹ ಇರದೇ ಇದ್ದರೆ ಸದರಿ ನೌಕರರು ಸದರಿ ಗ್ರಾಮದಲ್ಲಿರುವ ಕೊಠಡಿಯನ್ನು ಬಾಡಿಗೆಗೆ ಪಡೆದುಕೊಂಡು ಕೇಂದ್ರಸ್ಥಾನದಲ್ಲಿಯೇ ಇದ್ದು ಕಾರ್ಯನಿರ್ವಹಿಸಬೇಕು ಮತ್ತು ಸಾರ್ವಜನಿಕರಿಗೆ ಯಾವಾಗಲೂ ಕೇಂದ್ರಸ್ಥಾನದಲ್ಲಿ ಲಭ್ಯವಿರಬೇಕೆಂದು ನಿಯಮವಾಗಿರುತ್ತದೆ. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾವು ಕೇಂದ್ರಸ್ಥಾನದಲ್ಲಿ ವಾಸವಿರುತ್ತಾರೆಂಬುದರ ಬಗ್ಗೆ ತಿಳಿಸಿರುವುದಿಲ್ಲ. ಆದರೆ ದಿ.16.11.2017ರಿಂದ ಬೆಳಿಗ್ಗೆ 10.30ರಿಂದ ಸಂಜೆ 5.30ರವರೆಗೆ ತಿಮ್ಮಸಂದ್ರ ಗ್ರಾಮದಲ್ಲಿ

ಕಾರ್ಯನಿರ್ವಹಿಸುತ್ತಿದ್ದಾರೆಂದು ತಿಳಿಸಿರುತ್ತಾರೆ. ಉಳಿದ ಸಮಯದಲ್ಲಿ 3ನೇ ಎದುರುದಾರರು ಎಲ್ಲಿ ಇರುತ್ತಾರೆಂಬುದರ ಬಗ್ಗೆ ತಿಳಿಸಿರುವುದಿಲ್ಲ. ಕೆ.ಸಿ.ಎಸ್ ಆರ್.ನಿಯಮ 14ರ ಪ್ರಕಾರ:

> *"the headquarters of Govt. servant are either the station which has been declared to be his headquarters by the authority competent to prescribe his headquarters for the purpose of travelling allowance or in the absence of such declaration, the station where the records of his office are kept."*
>
> *It is the general rule that the Government Servant shall not leave the Headquarters without prior permission of the authority competent to sanction the casual leave."*

29.ಅಲ್ಲದೇ ಆ.ಸ.ನೌ ರವರು ತಾವು ಚಾರ್ಜ್ ತೆಗೆದುಕೊಳ್ಳುವ ಮೊದಲು ಮೊದಲಿನ ಗ್ರಾಮ ಲೆಕ್ಕಾಧಿಕಾರಿಗಳು ತಿಮ್ಮಸಂದ್ರದಲ್ಲಿ ಎಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎಂದು ತಿಳಿಸಿರುವುದಿಲ್ಲ. ಆ.ಸ.ನೌರವರಿಗೆ ತಿಮ್ಮಸಂದ್ರದಲ್ಲಿ ಕರ್ತವ್ಯ ನಿರ್ವಹಿಸಲು ಕಟ್ಟಡದ ತೊಂದರೆ ಇದ್ದಿದ್ದೇ ಆದರೆ ಆ.ಸ.ನೌರವರು ತಹಶೀಲ್ದಾರ್‌ರವರಿಗೆ ಪತ್ರವನ್ನು ಬರೆದು ತನಗೆ ತಿಮ್ಮಸಂದ್ರದಲ್ಲಿ ಎಲ್ಲಿ ಕೆಲಸ ಮಾಡಬೇಕೆಂದು ಕೇಳಬಹುದಾಗಿತ್ತು. ಆದರೆ ಆ ರೀತಿ ಯಾವುದೇ ಪತ್ರ ವ್ಯವಹಾರವನ್ನು ಮಾಡಿರುವುದಿಲ್ಲ. ಆ.ಸ.ನೌ ರವರ ಪ್ರಕಾರ ತಾನು ದೊಡ್ಡಬಳ್ಳಾಪುರದ ತಹಶೀಲ್ದಾರ್ ಕಛೇರಿಯ ಎದುರುಗಡೆ ಶ್ರೀ. ನಾಗರಾಜ್ ಇವರ ಕಟ್ಟಡದಲ್ಲಿ ಒಂದು ಕೋಣೆಯನ್ನು ಪಡೆದುಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದೆ ಅಂತಾ ಹೇಳಿದ್ದು, ಅದೇ ರೀತಿ ತಿಮ್ಮಸಂದ್ರದಲ್ಲಿ ತಹಶೀಲ್ದಾರ್ ರವರ ಅನುಮತಿ ಮೇರೆಗೆ ಒಂದು ಕೊಠಡಿಯನ್ನು ಪಡೆದುಕೊಂಡು ಕರ್ತವ್ಯ

ನಿರ್ವಹಿಸಬಹುದಾಗಿತ್ತು. ನಿ.ಡಿ.19 ರಿಂದ 21 ರವರೆಗಿನ ದಾಖಲಾತಿಗಳ ಪ್ರಕಾರ ಆ.ಸ.ನೌರವರಿಗೆ ತಿಮ್ಮಸಂದ್ರದಿಂದ ಬಾಶೆಟ್ಟಿಹಳ್ಳಿ ಕಂದಾಯ ವೃತ್ತಕ್ಕೆ ವರ್ಗಾವಣೆಯಾಗಿದ್ದು, ದಿನಾಂಕ: 01/07/2019 ರಿಂದ ಅಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಕಂಡುಬರುತ್ತದೆ.

30. ಈ ಮೇಲಿನ ದಾಖಲಾತಿಗಳು ಹಾಗೂ ಸಾಕ್ಷಿಗಳನ್ನು ಪರಿಗಣಿಸಿದಾಗ ದೋಷಾರೋಪಣೆಯ ಪ್ರಕಾರ ದಿನಾಂಕ: 28/08/2017 ರಿಂದ 15/11/2018 ರವರೆಗೆ ಆ.ಸ.ನೌ ರವರು ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವುದಿಲ್ಲ ಅಂತಾ ಕಂಡುಬರುತ್ತದೆ.

31. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ-1ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

32. **ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ **ಶ್ರೀ. ವೈ.ಎಸ್ ಮಂಜುನಾಥ್**, ಗ್ರಾಮ ಲೆಕ್ಕಿಗರು, ತಿಮ್ಮಸಂದ್ರ ವೃತ್ತ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌರವರ ನಿವೃತ್ತಿ ದಿನಾಂಕ: 31/08/2039 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. G.M Rajanna S/o A Munegowda, Thimmasandra, Doddaballapura Taluk, Bengaluru. |
| 2 | **Documents marked on behalf of the Disciplinary Authority Ex.P-1 to Ex.P-4** | |
| | **Ex.P.1** | Order dtd: 09/11/2017 of Tahasildar, Doddaballapura Taluk, Doddaballapura. |
| | **Ex.P.2& 2(a)** | Complaint given to this institution dtd: 06/02/2018 with Signature. |
| | **Ex.P.3** | Form No.1. |
| | **Ex.P.4** | Form No.2 (Affidavit). |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Y.S Manjunath, Village Accountant, Thimmasandra Circle, Doddaballapura Taluk, Bengaluru Rural District. |
| | **DW-2** | Sri. M. Balaraju S/o Late C. Munivenkatappa, Thimmasandra, Doddaballapura Taluk, Bengaluru Rural District. |
| 4 | **Documents marked on behalf of the DGOs through the complainant** | |
| | **Ex.D.1** | Official memorandum dtd: 11/03/2016 by Tahasildar, Soraba Taluk, Soraba. |
| | **Ex.D.2** | Government Order dtd: 26/02/2016 of Revenue Department. |
| | **Ex.D.3** | Official memorandum dtd: 24/03/2016 of DC, |

| | | |
|---|---|---|
| | | Bengaluru Rural District. |
| | **Ex.D.4** | Letter dtd: 24/03/2016 addressed to Tahasildar, Doddaballapura Taluk, Doddaballapura. |
| | **Ex.D.5** | Official memorandum dtd: 09/08/2016 of Tahasildar, Doddaballapura Taluk. |
| | **Ex.D.6** | Official memorandum dtd: 04/11/2016 of Tahasildar, Doddaballapura Taluk. |
| | **Ex.D.7** | Letter dtd: 14/02/2017 addressed to Tahasildar, Doddaballapura Taluk. |
| | **Ex.D.8** | Official memorandum dtd: 17/06/2017 of Tahasildar, Doddaballapura Taluk. |
| | **Ex.D.9** | Official memorandum dtd: 29/06/2017 of Tahasildar, Doddaballapura Taluk. |
| | **Ex.D.10** | Representation given to Tahasildar, Doddaballapura Taluk with enclosure. |
| | **Ex.D.11** | Letter dtd: 02/08/2017 addressed to Tahasildar, Doddaballapura Taluk. |
| | **Ex.D.12** | Official memorandum dtd: 28/08/2017 of Tahasildar, Doddaballapura Taluk. |
| | **Ex.D.13** | Representation dtd: 15/09/2017 given by complainant to Tahasildar, Doddaballapura Taluk. |
| | **Ex.D.14** | Letter dtd: 07/10/2017 of Revenue Inspector, Kasaba Hobli, Doddaballapura Taluk. |
| | **Ex.D.15** | Report dtd: 28/10/2017 submitted by Revenue Inspector to Tahasildar, Doddaballapura Taluk. |
| | **Ex.D.16** | Report submitted to Tahasildar, Doddaballapura Taluk. |
| | **Ex.D.17** | Office note and order dtd: 03/11/2017. |

| | | |
|---|---|---|
| | **Ex.D.18** | Official memorandum dtd: 09/11/2017 of Tahasildar, Doddaballapura Taluk. |
| | **Ex.D.19** | Official memorandum dtd: 29/06/2019 of Revenue Department. |
| | **Ex.D.20** | Letter dtd: 01/07/2019 addressed to Tahasildar, Doddaballapura Taluk. |
| | **Ex.D.21** | Official memorandum dtd: 01/07/2019 of Tahasildar, Doddaballapura Taluk. |
| | **Ex.D.22** | Letter dtd: 16/11/2017 addressed to Village Accountant, Shivapura Circle, Thimmasandra. |
| | **Ex.D.23** | Photographs. |

Dated this the 19th January, 2022

19/1

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.